ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 10.09.2024.

**ಪಾಟೀ ಸವಾಲು:** 2ನೇ ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ:

ನನ್ನ ತಂದೆಯ ತಾಯಿ ಹೆಸರು ನಾಗಮ್ಮ, ನನ್ನ ಅಜ್ಜನ ಹೆಸರು ದುಂಡಪ್ಪ ಇರುತ್ತದೆ. ಅವರಿಬ್ಬರು ತಿರಿಕೊಂಡಿರುತ್ತಾರೆ, ಅಜ್ಜಿ ತಿರಿಕೊಂಡು 9 ವರ್ಷವಾಯಿತು, ನನ್ನ ಅಜ್ಜ ತಿರಿಕೊಂಡು ಎಷ್ಟು ವರ್ಷವಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನಿಗೆ ಒಟ್ಟು 7 ಜನ ಮಕ್ಕಳು, ಅವರ ಪೈಕಿ 4 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರೆಂದರೇ, ವಿಠ್ಠಲ್ ರಾಯ, ಶಿವರಾಯ, ಗುರಣ್ಣ ಹಾಗೂ ನನ್ನ ತಂದೆ ಹನಮಂತ ರಾಯ ಇರುತ್ತಾರೆ. ಅದೇ ರೀತಿ ಹೆಣ್ಣು ಮಕ್ಕಳಾದ ಗೋದಾಬಾಯಿ, ನಿಂಗಮ್ಮ ಗಂಗಾಬಾಯಿ ಇರುತ್ತಾರೆ. ಮೇಲೆ ಹೇಳಿದ ನನ್ನ ತಂದೆ

ಸಹೋದರರು ಮತ್ತು ಸಹೋದರಿಯರು ಎಲ್ಲರು ಜೀವಂತ ಇರುತ್ತಾರೆ.

ನನ್ನ ಅಜ್ಜನಿಗೆ ಒಟ್ಟು 8 ಎಕರೆ ಮೇಲೆ ಆಸ್ತಿ ಇತ್ತು, ಅದರೆ ಸರ್ವೆ ನಂಬರ ಗೊತ್ತಿಲ್ಲ. ಆದರೆ ನಮ್ಮ ಹೊಲದ ಸರ್ವೆ ನಂಬರ 18 ಇರುತ್ತದೆ. ಅದೇ ರೀತಿ ನನ್ನ ಅಜ್ಜನಿಗೆ 4 ಮನೆಗಳು ಇದ್ದವು. ನನ್ನ ಅಜ್ಜನಿಗೆ ಸೇರಿದ ಎಲ್ಲ ಆಸ್ತಿಗಳನ್ನು ಆತನ ಮಕ್ಕಳು ವಿಭಜನೆ ಮಾಡಿಕೊಂಡಿರುತ್ತಾರೆ. ಈ ದಾವೆಯನ್ನು ನಾನು ಜಮೀನಿನ ಸಲುವಾಗಿ ಹಾಕಿರುತ್ತೇನೆ. ಅದನ್ನು ಬಿಟ್ಟು ಮನೆಯ ಮೇಲೆ ಕೂಡಾ ಹಾಕಿರುತ್ತೇನೆ. ಸದರಿ ಮನೆ ಬಸವಕಲ್ಯಾಣ ತಾಲುಕಾ, ಬಾಗ ಹಿಪ್ಪರಗಾದಲ್ಲಿ ಇರುತ್ತದೆ. ನನ್ನ ತಂದೆಯ ಉಳಿದ ಸಹೋದರರು ಮತ್ತು ಸಹೋದರಿಯರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ದೊಡ್ಡಪ್ಪ 2ನೇ ಪ್ರತಿವಾದಿಯನ್ನು ಪಾರ್ಟಿ ಮಾಡಿರುತ್ತೇನೆ. ಏಕೆಂದರೆ ನನ್ನ ತಂದೆಗೆ ಮದ್ಯಪಾನ ಮಾಡಿಸಿ ಆಸ್ತಿ ಬರೆಯಿಸಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಸದ್ಯ 2ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿ 2ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿ ಸುಮಾರು 10-12 ವರ್ಷವಾಗಿರುತ್ತದೆ. ಅದಕ್ಕಿಂತ ಮುಂಚೆ ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿ ಇತ್ತು. ಸುಮಾರು 32 ವರ್ಷಗಳಿಂದ ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿ ಇತ್ತು. ಸದರಿ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ದಾವಾ ಸ್ವತ್ತು ನನ್ನ ತಂದೆ ಹೆಸರಿನಲ್ಲಿರುವಾಗ ನನ್ನದು ಏನು ತಕರಾರು ಇರಲಿಲ್ಲ. ನನ್ನ ತಂದೆ ಹೆಸರಿನಲ್ಲಿರುವಾಗ ನಾನು ನನ್ನದು ಕೂಡಾ ಹಿಸ್ಸೆ ಇರುತ್ತದೆ ಎಂದು ನಾನು ಕೇಳಿಲ್ಲ, ಏಕೆಂದರೆ ನಾನು ಚಿಕ್ಕವಳು ಇದ್ದೆ. ನಾನು ಮೆಜರ್ ಆದ ನಂತರ ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡಿ ಎಂದು ಕೇಳಿಲ್ಲ, ಮದುವೆಯಾದ ನಂತರ ಕೇಳಿರುತ್ತೇನೆ.

ನನ್ನ ತಂದೆಯನ್ನು ಕುರಿತು ದಾವಾ ಆಸ್ತಿಯಲ್ಲಿ ಪಾಲು ಕೇಳಿದಾಗ ಆತ, 2ನೇ ಪ್ರತಿವಾದಿ ನನಗೆ ಮದ್ಯಪಾನ ಮಾಡಿಸಿ ಆಸ್ತಿ ಬರೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಆ ಕಾರಣ ಸಲುವಾಗಿ ಈ ದಾವೆ ಮಾಡುವ ಪ್ರಸಂಗ ಬಂದಿರುತ್ತದೆ. 2ನೇ ಪ್ರತಿವಾದಿ ಹೆಸರು ಪಹಣಿಯಲ್ಲಿ ಬಂದ ನಂತರವೇ ಈ

ದಾವೆ ಹಾಕಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ 2ನೇ ಪ್ರತಿವಾದಿ ಹೆಸರಿನಲ್ಲಿ ಯಾವ ಆಧಾರ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ 2ನೇ ಪ್ರತಿವಾದಿ, ನನ್ನ ತಂದೆ 1ನೇ ಪ್ರತಿವಾದಿಗೆ ಮದ್ಯಪಾನ ಮಾಡಿಸಿ ಆಸ್ತಿ ಬರೆಯಿಸಿಕೊಂಡಿರುತ್ತಾನೆ. ಯಾವ ಆಧಾರದ ಮೇಲೆ ದಾವಾ ಆಸ್ತಿ 2ನೇ ಪ್ರತಿವಾದಿ ಹಸೆರಿನಲ್ಲಿ ಆಯಿತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. 2ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿಯಾಗಿ ಸುಮಾರು 10-12 ವರ್ಷವಾಗಿರುತ್ತದೆ.

ನಾನು 2ನೇ ಪ್ರತಿವಾದಿ ಹೆಸರಿನಲ್ಲಿ ಆದ ಪಹಣಿಗಳನ್ನು ಪ್ರಶ್ನೆ ಮಾಡಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿಯಲ್ಲಿ ಏನು ತಿರ್ಮಾನವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಸದ್ಯ ನನ್ನ ಗಂಡ ಮನೆ ಸುಮಾರು 7 ವರ್ಷಗಳಿಂದ ಜೆರಟಗಿಯಲ್ಲಿ ಇರುತ್ತೇನೆ. ನನ್ನ ತಂದೆ 1ನೇ ಪ್ರತಿವಾದಿ ಹೋಟೇಲ್‌ನಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಎಷ್ಟು ವೇತನ ಇತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಅವರು ದುಡಿದಿದ್ದು ಅವರ ಮದ್ಯಪಾನಕ್ಕೆ ಆಗುತ್ತಿತ್ತು. ನನ್ನ ತಂದೆ ಮತ್ತು ನನ್ನ ಮಧ್ಯ ಯಾವುದೇ ವೈಷಮ್ಯ ಇರುವುದಿಲ್ಲ, ಆದರೆ ಈ ಪಾಲು ಸಲುವಾಗಿ ಮಾತ್ರ ಇರುತ್ತದೆ. ಈಗ ನಾನು ಮತ್ತು ನನ್ನ ತಂದೆ ಮಾತನಾಡುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ 1ನೇ ಪ್ರತಿವಾದಿ ಕಲಬುರಗಿಯ ಹೋಟೇಲ್‌ದಲ್ಲಿ ಇರುತ್ತಾರೆ. ನನ್ನ ತಾಯಿ ಕೂಡಾ 1ನೇ ಪ್ರತಿವಾದಿ ಜೊತೆ ಇರುತ್ತಾರೆ.

ನನ್ನ ತಂದೆ-ತಾಯಿ ಇಬ್ಬರು ಚೆನ್ನಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಹೊಲದ ಸಲುವಾಗಿ ಜಗಳವಾಡುತ್ತಾರೆ ಎಂದು ನುಡಿಯುತ್ತಾರೆ, ಆದರೆ ಒಟ್ಟಿಗೆ ಇರುತ್ತಾರೆ. 1 ಮತ್ತು 2ನೇ ಪ್ರತಿವಾದಿಯರು ಮಧ್ಯ ಯಾವುದೇ ವೈಷಮ್ಯ ಇರುವುದಿಲ್ಲ. ನನ್ನ ಮತ್ತು 2ನೇ ಪ್ರತಿವಾದಿಯ ಮಧ್ಯ ಸಂಬಂಧ ಸುಮಾರು 10-12 ವರ್ಷಗಳಿಂದ ಚೆನ್ನಾಗಿ ಇಲ್ಲ. ನನ್ನ ಮತ್ತು 2ನೇ ಪ್ರತಿವಾದಿಯ ಮಧ್ಯ ಯಾವುದೇ ಜಗಳವಾಗಿಲ್ಲ, ಆದರೆ ನಾನು ಹೊಲ ಕೊಡು ಎಂದು ಕೇಳಿದೇ, ಅವರು ಕೊಡುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ಮದುವೆಯಾಗಿ 7 ವರ್ಷವಾಗಿರುತ್ತದೆ. ಮದುವೆಯ ಕಾಲಕ್ಕೆ ನನ್ನ ತಂದೆ

ಯಾವುದೇ ಹಣ ಕೊಟ್ಟಿಲ್ಲ, ನನ್ನ ತಾಯಿ 2 ವರೆ ತೊಲಾ ಬಂಗಾರ ಹಾಗೂ ರೂ.50,000/- ಹಣ ಕೊಟ್ಟಿರುತ್ತಾರೆ.

ನನ್ನ ಮದುವೆಗೆ ಸುಮಾರು ರೂ.3 ವರೆ ಲಕ್ಷ ಖರ್ಚು ಆಗಿರುತ್ತದೆ. ಮೇಲೆ ಹೇಳಿದ 2 ವರೆ ತೊಲಾ ಬಂಗಾರದ ಪೈಕಿ ಅರ್ಧ ತೊಲಾ ಕೊಟ್ಟಿರುತ್ತರೆ, ಇನ್ನು 2 ತೊಲಾ ಕೊಡಬೇಕಾಗಿರುತ್ತದೆ. ನನ್ನ ಮದುವೆಗೆ ನನ್ನ ತಂದೆ ಬಂದಿದ್ದರು, ಆದರೆ ಏನು ಕೊಟ್ಟಿರುವುದಿಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಿ ಸುಮಾರು 12-13 ವರ್ಷವಾಗಿರುತ್ತದೆ. ಆಗ ನಾನು ಚಿಕ್ಕವಳು ಇದ್ದೆ. 1ನೇ ಪ್ರತಿವಾದಿ ದಾವಾ ಸ್ವತ್ತುನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಮಾರಾಟ ಮಾಡಿದ್ದು ನನಗೆ ಗೊತ್ತಾಗಿ ಸುಮಾರು 5 ವರ್ಷವಾಗಿರುತ್ತದೆ, ಆವಾಗ ನನ್ನ ಮದುವೆಯಾಗಿತ್ತು. ಸಾಕ್ಷಿ ಮುಂದುವರೆದು ನನ್ನ ತಂದೆಯನ್ನು ಬಾಯಿಮಾತಲ್ಲಿ ಕೇಳಿರುತ್ತೇನೆ, ಆಗ 2ನೇ ಪ್ರತಿವಾದಿ ನನ್ನನ್ನು ಬೈದಿರುತ್ತಾರೆ.

ಮಾರಾಟ ಮಾಡಿದ್ದು ಗೊತ್ತಾಗಿ ಎಷ್ಟು ವರ್ಷದ ನಂತರ ಕೇಸ್ ಹಾಕಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮಾರಾಟ ಮಾಡಿದ್ದು ನನಗೆ ಗೊತ್ತಿಲ್ಲ, ಆದರೆ 2022ರಲ್ಲಿ ಕೇಸ್ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆ ಬರೆಯಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವೆಯಲ್ಲಿ ನಾನು ದಾವಾ ಸ್ವತ್ತು ನನ್ನ ಅಜ್ಜ ಇರುವಾಗಲೇ 2ನೇ ಪ್ರತಿವಾದ ಹೆಸರಿನಲ್ಲಿ ತೋರಿಕೆಗಾಗಿ ಇತ್ತು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜನುಮ ದಿಃ 25.10.1998 ಇರುತ್ತದೆ. 2003ರಲ್ಲಿ ಖರೀದಿ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು, ಹಿಸ್ಸೆ ಕೇಳುವ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನನ್ನ ಮದುವೆ ಖರ್ಚಿನ ಸಲುವಾಗಿ 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ಗೊತ್ತಿದ್ದರೂ ಕೂಡಾ ನನ್ನ ತಾಯಿ ಮದುವೆ ಖರ್ಚು ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

ಅದೇ ರೀತಿ ನನ್ನ ತಂದೆಗೆ ಕೆಟ್ಟ ಚಟಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಸ್ವತ್ತನ್ನು 2ನೇ ಪ್ರತಿವಾದಿಯಿಂದ ಕಸಿದುಕೊಳ್ಳುವ ಉದ್ದೇಶದಿಂದ, ಸುಳ್ಳು ದಾವೆ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**